## ಸಂಪಾದಕೀಯ

# ಚೈತನ್ಯದ ಬೆಂಬತ್ತಿ

## ಅರಿವು

ಅಸ್ತಿತ್ವವೆನ್ನುವುದು ಜಗತ್ತಿನ ಎಲ್ಲ ವಸ್ತುಗಳ ಮೂಲಭೂತವಾದ ಗುಣ. ಅಸ್ತಿತ್ವವಿರುವ ವಸ್ತುವು ತೋರಿಕೊಳ್ಳುತ್ತದೆ ಅಥವಾ ಕಾಣಿಸಿಕೊಳ್ಳುತ್ತದೆ. ಹೀಗಾಗಿ 'ತೋರಿಕೊಳ್ಳುವ' ಅಥವಾ 'ಕಾಣಿಸಿಕೊಳ್ಳುವ' ಗುಣ ಕೂಡ ಎಲ್ಲ ವಸ್ತುಗಳ ಮೂಲಭೂತವಾದ ಸ್ವಭಾವವೆಂದು ನಾವು ಭಾವಿಸಬೇಕಾಗುತ್ತದೆ. ಒಂದು ವಸ್ತುವಿನ 'ತೋರಿಕೊಳ್ಳುವ' ಗುಣವನ್ನೇ ನಾವು ಅದರ 'ಅರಿವು' ಅಥವಾ 'ಜ್ಞಾನ' ವೆಂದು ಪರಿಗಣಿಸುತ್ತೇವೆ. ಉದಾಹರಣೆಗೆ ಒಂದು ಮಡಕೆ ಇದೆ. ಅದು ಅಸ್ತಿತ್ವದಲ್ಲಿ ಇದ್ದರೆ, ಅದು ಕಾಣಿಸಿಕೊಳ್ಳುತ್ತದೆ. ಅದರ ಕಾಣಿಸಿಕೊಳ್ಳುವ ಲಕ್ಷಣವನ್ನೇ ನಾವು ಮಡಕೆಯ ಅರಿವು ಅಥವಾ ಜ್ಞಾನ ಎಂದು ಕರೆಯುತ್ತೇವೆ.

ಈ ಸಂದರ್ಭದಲ್ಲಿ ಜ್ಞಾನದ ಕುರಿತಾದ ನಾಲ್ಕು ಪ್ರಶ್ನೆಗಳು ಚಿಂತಕರ ವಿಶ್ಲೇಷಣೆಗೆ ಪ್ರಚೋದನೆ ನೀಡುತ್ತವೆ: ೧. ಮಾನವನ ಅರಿವಿನ ಸ್ವಭಾವವೇನು? ೨. ಮಾನವನ ಮನಸ್ಸಿಗೆ ಅರಿಯುಬಲ್ಲ ಸಾಮರ್ಥ್ಯ ಇದೆಯೇ? ೩. ನೈಜ ಜ್ಞಾನವೆಂಬುದು ಇದೆಯೇ ಅಥವಾ ನಾವು ಕೇವಲ ಅಭಿಪ್ರಾಯಗಳು ಮತ್ತು ಊಹೆಗಳನ್ನು ಮಾತ್ರ ಅವಲಂಬಿಸಿರಬೇಕೆ? ೪. ನಮ್ಮ ಅರಿವು ಇಂದ್ರಿಯಗ್ರಾಹ್ಯವಾದ ಸಂಗತಿಗಳ ತಿಳಿವಳಿಕೆಗೆ ಮಾತ್ರ ಸೀಮಿತವಾಗಿದೆಯೇ ಅಥವಾ ನಾವು ಇಂದ್ರಿಯಗಳನ್ನು ಮೀರಿ ಹೋಗಬಲ್ಲೆವೇ?

> ನಾವು ಇತರ ವಿಜ್ಞಾನಗಳನ್ನು ಅಧ್ಯಯನ ಮಾಡುವಂತೆಯೇ ಅತೀಂದ್ರಿಯ ಜ್ಞಾನವನ್ನೂ ಅಭ್ಯಾಸ ಮಾಡಬೇಕು. ನಾವು ವಿಚಾರದ ಮೇಲೆ ತಳಹದಿಯನ್ನು ಹಾಕಿ ಅದು ಎಲ್ಲಿಯವರೆಗೆ ನಮ್ಮನ್ನು ಕರೆದುಕೊಂಡು ಹೋಗುವುದೋ ಅಲ್ಲಿಯವರೆಗೆ ಅದನ್ನು ಅನುಸರಿಸಬೇಕು. ಯುಕ್ತಿ ಎಲ್ಲಿ ಸೋಲುವುದೋ ಅಲ್ಲಿ ಯುಕ್ತಿಯೇ ತನಗೆ ಅತೀತವಾದ ಅವಸ್ಥೆಯನ್ನು ತೋರುವುದು.
>
> – ಸ್ವಾಮಿ ವಿವೇಕಾನಂದ

ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವುದೇ ಜ್ಞಾನಶಾಸ್ತ್ರದ (epistemology) ಹೆಗ್ಗುರಿ. ಈ ಪ್ರಯತ್ನದಲ್ಲಿ ನಾವು ಎದುರಿಸಬೇಕಾದ ಮೂರು ಪ್ರಮುಖ ಸಮಸ್ಯೆಗಳು ಹೀಗಿವೆ: ೧. ಜ್ಞಾನದ ಆಕರಗಳು ಅಥವಾ ಮೂಲಗಳು ಯಾವುವು? ೨. ಜ್ಞಾನದ ಲಕ್ಷಣವೇನು? ೩. ನಮ್ಮ ಮನಸ್ಸಿನಿಂದಾಚೆ, ನಾವು ತಿಳಿಯಬೇಕಾದ ನೈಜ ಪ್ರಪಂಚವೆಂಬುದಿದೆಯೇ? ಇದ್ದರೆ, ಅದನ್ನು ನಾವು ತಿಳಿಯಲಾದೀತೆ? ಆಗುವುದಾದರೆ, ಹೇಗೆ ತಾನೆ ತಿಳಿಯುವುದು? ೪. ನಮ್ಮ ಜ್ಞಾನವೆಂಬುದು ಪ್ರಮಾಣೀಭೂತವಾದುದೆ? ಸತ್ಯವನ್ನು ಸುಳ್ಳಿನಿಂದ ಬೇರ್ಪಡಿಸುವುದಾದರೂ ಹೇಗೆ? ಅದನ್ನು ಪರೀಕ್ಷಿಸಿನೋಡುವುದು ಹೇಗೆ? ಈ ವಿಷಯಗಳ ವಿಶ್ಲೇಷಣೆಯನ್ನು ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಅತ್ಯಂತ ವಿಸ್ತೃತವಾಗಿ ಮಾಡಲಾಗಿದೆ.

### ಜ್ಞಾನದ ಆಕರ

ನಾವಿಟ್ಟುಕೊಂಡಿರುವ ನಂಬಿಕೆಗಳು ಜ್ಞಾನವಾಗಬಲ್ಲುವೆ? ಅವುಗಳಿಗೆ ನಮ್ಮ ಆಸೆಗಳು, ಭಾವನಾತ್ಮಕ ಆವಶ್ಯಕತೆಗಳು, ಪೂರ್ವಾಗ್ರಹಗಳು ಮುಂತಾದ ಹಲವು ಮನೋವೈಜ್ಞಾನಿಕ ಕಾರಣಗಳು ಇರುತ್ತವೆ. ಆದ್ದರಿಂದ ಅವುಗಳನ್ನು ಜ್ಞಾನವೆಂದು ಕರೆಯಲಾಗುವುದಿಲ್ಲ. ಅವು ಸತ್ಯವಾಗಿದ್ದರೂ ಕೂಡ ಅವು ಜ್ಞಾನದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅವುಗಳನ್ನು ಜ್ಞಾನವೆಂದು ಪರಿಗಣಿಸಬೇಕಾದರೆ, ಅವು ನಂಬಲರ್ಹವಾದ ಮೂಲಗಳಿಂದ ನಮಗೆ ದೊರೆತಂತಹವುಗಳಾಗಿರಬೇಕು. ಅಂತಹ ನಾಲ್ಕು ಆಕರಗಳನ್ನು ಪಾಶ್ಚಾತ್ಯ ತತ್ತ್ವಶಾಸ್ತ್ರವು ಪರಿಗಣಿಸುತ್ತದೆ: ೧. ಪ್ರತ್ಯಕ್ಷ ಪ್ರಮಾಣ ೨. ಚಿಂತನೆ ಅಥವಾ ತರ್ಕ ೩. ಆಪ್ತವಾಕ್ಯ ಮತ್ತು ೪. ಅನುಭೂತಿ.

#### ೧. ಪ್ರತ್ಯಕ್ಷ

ಇಂದ್ರಿಯಗ್ರಾಹ್ಯ ವಾದವು (empiricism) ಜ್ಞಾನವು ಕೇವಲ ಇಂದ್ರಿಯಗಳ ಮೂಲಕ ಮಾತ್ರವೇ ದೊರೆಯಬಲ್ಲುದು ಎಂದು ಹೇಳುತ್ತದೆ. ಯಾವುದನ್ನು ನಾವು ನೋಡುತ್ತೇವೆಯೋ, ಕೇಳುತ್ತೇವೆಯೋ, ಮುಟ್ಟುತ್ತೇವೆಯೋ, ವಾಸನೆ ನೋಡುತ್ತೇವೆಯೋ, ರುಚಿ ನೋಡುತ್ತೇವೆಯೋ –ಅದು ಮಾತ್ರ ನಮ್ಮ ಜ್ಞಾನದ ಪರಿಧಿಯೊಳಗೆ ಬರುವುದು ಎಂದು ಅದು ಹೇಳುತ್ತದೆ. ಹೀಗೆ ಮಾನವನ ಪ್ರತ್ಯಕ್ಷ ಅನುಭವ, ವೀಕ್ಷಣೆ ಅಥವಾ ಯಾವುದನ್ನು ಬಾಹ್ಯ ವಾತಾವರಣದಿಂದ ಇಂದ್ರಿಯಗಳು ಸ್ವೀಕರಿಸುವುವೋ ಅದಕ್ಕೆ ಇಂದ್ರಿಯಗ್ರಾಹ್ಯ ವಾದ ಒತ್ತುಕೊಡುತ್ತದೆ. ಆಧುನಿಕ ವಿಜ್ಞಾನ ಕೂಡ ಇಂದ್ರಿಯಗಳಿಂದ ಪಡೆಯುವ ಅಂಶಗಳನ್ನು ಮತ್ತು ಅವುಗಳ ನಡುವಣ ಸಂಬಂಧಗಳನ್ನು ಮಾತ್ರ ಪರಿಗಣಿಸುತ್ತದೆ.

ಆದರೆ ಜ್ಞಾನವೆಂಬುದು ಬರಿ ಇಂದ್ರಿಯಗಳ ಸಂವೇದನೆ ಮಾತ್ರವಲ್ಲ; ಅದರಲ್ಲಿ ಮನಸ್ಸಿನ ಪಾತ್ರವೂ ಮುಖ್ಯವಾದುದು. ಮನಸ್ಸು ಇಂದ್ರಿಯಗಳಿಂದ ಬಂದ ಸಂವೇದನೆಗಳನ್ನು ಒಬ್ಬ ವ್ಯಕ್ತಿಯ ಆಸಕ್ತಿ ಮತ್ತು ಉದ್ದೇಶಗಳಿಗೆ ಅನುಸಾರವಾಗಿ ಆಯ್ಕೆ ಮಾಡುತ್ತದೆ ಮತ್ತು ಅದನ್ನು ಅನುಭವವನ್ನಾಗಿ ರೂಪಿಸುತ್ತದೆ. ಹೀಗೆ ಇಂದ್ರಿಯಗಳ ಜೊತೆಗೆ ಮನಸ್ಸಿನ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವ ತತ್ತ್ವಶಾಸ್ತ್ರದ ವಿಭಾಗವನ್ನು ವಾಸ್ತವಿಕತಾ ವಾದ (pragmatism) ಎಂದು ಕರೆಯುತ್ತಾರೆ. ಆದರೆ ನಾವು ಮನಸ್ಸಿನಲ್ಲಿ ಭಾವಿಸುವ ವಸ್ತುವಿನ ಚಿತ್ರವು, ಬಾಹ್ಯದಲ್ಲಿರುವ ವಸ್ತುವನ್ನು ಯಥಾವತ್ತಾಗಿ ಪ್ರತಿನಿಧಿಸುತ್ತದೆಯೇ? ಇದನ್ನು ಕಂಡುಹಿಡಿಯುವುದು ಅಸಾಧ್ಯವೇ ಸರಿ.

## ೨. ಆಪ್ತವಾಕ್ಯ

ರಾಮ ಮತ್ತು ಕೃಷ್ಣ ಮುಂತಾದ ಪುರಾಣಕಾಲದ ವ್ಯಕ್ತಿಗಳು ಜೀವಿಸಿದ್ದರೆಂಬುದು ನಮಗೆ ಹೇಗೆ ಗೊತ್ತು? ಅವರು ಕಾಲ್ಪನಿಕ ವ್ಯಕ್ತಿಗಳಾಗಿರುವುದಕ್ಕೂ ಸಾಕು. ಆದರೆ ನಮಗೆ ಸಿಕ್ಕಿರುವ ಹಲವಾರು ಐತಿಹ್ಯಗಳು ಹಾಗೂ ಸಾಹಿತ್ಯಿಕ ಮತ್ತಿತರ ಆಕರಗಳ ಮೂಲಕ ಅವರು ಜೀವಿಸಿದ್ದರೆಂಬುದನ್ನು ನಾವು ತಿಳಿದುಕೊಳ್ಳಬಹುದು. ಹೀಗೆಯೇ ನಮ್ಮ ದೈನಂದಿನ ಜೀವನದಲ್ಲಿ ನಾವು ಪಡೆಯುವ, ಉಪಯೋಗಿಸುವ ಅನೇಕ ಜ್ಞಾನಪ್ರಕಾರಗಳು, ನಾವು ಇತರರಿಂದ ಕೇಳಿ ಅಥವಾ ವಿಷಯ ಪರಿಣತರ ಪುಸ್ತಕಗಳನ್ನು ಅಧ್ಯಯನ ಮಾಡಿ ಪಡೆದದ್ದೇ ಹೊರತು, ನಮ್ಮ ಇಂದ್ರಿಯಗಳಿಂದಾಗಲಿ, ಚಿಂತನೆಯಿಂದಾಗಲಿ ಪಡೆದದ್ದಲ್ಲ. ಈ ಬಗೆಯ ಜ್ಞಾನದ ಆಕರಗಳನ್ನು 'ಆಪ್ತವಾಕ್ಯ' ಎನ್ನುತ್ತಾರೆ.

## ೩. ಚಿಂತನೆ ಅಥವಾ ತರ್ಕ

'ಅ' ಮತ್ತು 'ಆ' – ಈ ಎರಡು ವಸ್ತುಗಳು ಒಂದೇ ಗುಣಲಕ್ಷಣಗಳನ್ನು ಹೊಂದಿವೆ. ಹಾಗೆಯೇ 'ಆ' ಮತ್ತು 'ಇ' –ಇವೆರಡೂ ಸಮಾನವಾಗಿವೆ. ಇದರಿಂದ ನಾವು ಏನನ್ನು ಗ್ರಹಿಸಬಹುದು? 'ಅ' ಮತ್ತು 'ಇ' – ಇವೆರಡೂ ಸಮಾನವಾಗಿವೆ ಎಂಬುದನ್ನು, ಅಲ್ಲವೇ? ಇದಕ್ಕೆ ನಮ್ಮ ಕಣ್ಣಿನ ಸಹಾಯವೇನೂ ಬೇಡ. ಕೇವಲ ತರ್ಕಬದ್ಧ ಚಿಂತನೆಯಿಂದ ನಾವು ಮೇಲಿನ ನಿಷ್ಕರ್ಷೆಗೆ ಬರಬಹುದು. ಹೀಗಾಗಿ, ಇಂತಹ ತಾರ್ಕಿಕ ಆಲೋಚನೆಯನ್ನೂ ಜ್ಞಾನದ ಆಕರವನ್ನಾಗಿ ನಾವು ಪರಿಗಣಿಸಬೇಕಾಗುತ್ತದೆ. ಈ ಬಗೆಯ ಚಿಂತನೆ ಮಾತ್ರವೇ ಜ್ಞಾನದ ಆಕರವಾಗಬಲ್ಲುದು ಎಂದು ಪರಿಗಣಿಸುವವರು ವಿಚಾರ ವಾದಿಗಳು (rationalists). ಅವರ ಪ್ರಕಾರ ಮನಸ್ಸು, ಇಂದ್ರಿಯಗಳ ಸಹಾಯವಿಲ್ಲದೆ, ಕೇವಲ ತರ್ಕ ಅಥವಾ ಆಲೋಚನೆಯಿಂದ ಸತ್ಯವನ್ನು ಆವಿಷ್ಕಾರ ಮಾಡಬಲ್ಲುದು.

ಉದಾಹರಣೆಗೆ ತರ್ಕ ಮತ್ತು ಗಣಿತಗಳು ಇಂದ್ರಿಯಗ್ರಾಹ್ಯ ಜ್ಞಾನವಲ್ಲ. ಆದರೂ ಅವು ನಂಬಲರ್ಹವಾದ ಜ್ಞಾನವನ್ನು ನೀಡುತ್ತವೆ. ಆದರೆ ವಾಸ್ತವಿಕತಾ ವಾದಿಗಳು ಇವನ್ನು ನೈಜ ಜ್ಞಾನವೆಂದು ನಂಬುವುದಿಲ್ಲ. ಅದಲ್ಲದೆ, ಚಿಂತನೆಯ ಮೂಲಕ ಗಳಿಸಿದ ಜ್ಞಾನವನ್ನು ನಾವು ಪರೀಕ್ಷೆಗೆ ಒಳಪಡಿಸಬೇಕಾದರೆ ಅದಕ್ಕೆ ಇಂದ್ರಿಯಾನುಭವದ ಆವಶ್ಯಕತೆ ಇದ್ದೇ ಇದೆ. ಉದಾಹರಣೆಗೆ ತ್ರಿಕೋಣಗಳ ನಿಯಮವನ್ನು ನಾವು, ತ್ರಿಕೋಣವನ್ನು ಬರೆದು, ಕೋನಗಳನ್ನು ಮತ್ತು ಭುಜಗಳನ್ನು ಅಳೆದೇ ನಿರ್ಧರಿಸಬೇಕಾಗುತ್ತದೆ. ಆದರೂ ಜ್ಞಾನದ ಗಳಿಕೆಯಲ್ಲಿ ಮನಸ್ಸಿನ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಬರಿಯ ಇಂದ್ರಿಯಗ್ರಾಹ್ಯತೆ ಜ್ಞಾನವಾಗಲು ಸಾಧ್ಯವಿಲ್ಲ.

## ೪. ಅನುಭೂತಿ

ಯಾವುದೇ ಬಗೆಯ ಇಂದ್ರಿಯಗಳ ಮತ್ತು ತರ್ಕ ಅಥವಾ ಮಾನಸಿಕ ಆಲೋಚನೆಗಳ ಸಹಾಯವಿಲ್ಲದೆ ಅಪರೋಕ್ಷವಾಗಿ ಜ್ಞಾನದ ಗ್ರಹಿಕೆ ಉಂಟಾಗುವ ಸಾಧ್ಯತೆಯನ್ನು ಅನುಭೂತಿ (Intuition) ಎಂದು ತತ್ತ್ವಶಾಸ್ತ್ರದಲ್ಲಿ ಗುರುತಿಸಿದ್ದಾರೆ. ಇವುಗಳನ್ನು ವಿದ್ವಾಂಸರು, 'ನಿಶ್ಚಿತತೆಯ ಸಾಕ್ಷಾತ್ ಸಂವೇದನೆ', 'ನಿಶ್ಚಿತಬುದ್ಧಿಯುಳ್ಳ ಸ್ಥಿತಿ' ' ಸತ್ಯದ ಅಪರೋಕ್ಷ ಗ್ರಹಿಕೆ' – ಎಂದೆಲ್ಲ ಬಣ್ಣಿಸುತ್ತಾರೆ.

"ಪ್ರಜ್ಞೆಯು ನೇರವಾಗಿ ಪಡೆದುಕೊಂಡ ಮಾಹಿತಿಗಳ ಪರಿಜ್ಞಾನ" (our awareness of the immediate data of consciousness) ಎಂದು ಒಬ್ಬ ತತ್ತ್ವಶಾಸ್ತ್ರಜ್ಞನು ಅನುಭೂತಿಯನ್ನು ವರ್ಣಿಸುತ್ತಾನೆ. ಈ ಬಗೆಯ ಜ್ಞಾನವು ಇತರೆಲ್ಲ ವಸ್ತುಗಳ ಜ್ಞಾನದಲ್ಲಿ ಮಿಳಿತವಾಗಿರುವ ಒಂದು ಅನಿವಾರ್ಯ ಅಂಶವಾಗಿದೆ. ಉದಾಹರಣೆಗೆ ನಾವು ಒಂದು ಶಬ್ದವನ್ನು ಆಲಿಸಿದಾಗ, ಅದರಲ್ಲಿ ನಮ್ಮ ಬಗೆಗಿನ ಅರಿವು ಮತ್ತು ಶಬ್ದದ ಅರಿವು ಇವೆರಡೂ ಕೂಡಿಕೊಂಡೇ ಇರುತ್ತದೆ. ಸ್ವಪ್ರಜ್ಞೆಯೆಂಬುದು ನಮ್ಮೆಲ್ಲ ಅನುಭವಗಳಲ್ಲಿಯೂ ಹಾಸುಹೊಕ್ಕಾಗಿರುವುದನ್ನು ನಾವು ಗಮನಿಸಬಹುದು. ಇದನ್ನೇ ಅನುಭೂತಿಯೆಂದು ಕರೆಯುವುದು.

ಅನುಭೂತಿಯು ಅತ್ಯಂತ ಉನ್ನತ ಸ್ತರದ ಜ್ಞಾನವಾಗಿದೆ. ಫ್ರಾನ್ಸ್ ದೇಶದ ತತ್ತ್ವಶಾಸ್ತ್ರಜ್ಞ ಹೆನ್ರಿ ಬರ್ಗ್‌ಸನ್ 'ಅನುಭೂತಿ' ಮತ್ತು 'ಬುದ್ಧಿಮತ್ತೆ' – ಇವೆರಡೂ ಪರಸ್ಪರ ವಿರುದ್ಧವಾದುವು ಎನ್ನುತ್ತಾನೆ. ಬುದ್ಧಿಯೆನ್ನುವುದು ಜಡಪದಾರ್ಥಗಳ ಗುಣಲಕ್ಷಣಗಳನ್ನು ತಿಳಿಯಲು ವಿಜ್ಞಾನವು ಬಳಸುವ ಸಾಧನ. ಅನುಭೂತಿಯು ಸಹಜರೂಪದ್ದಾಗಿದ್ದು, ಸ್ವಪ್ರಜ್ಞೆಯನ್ನು ಹೊಂದಿದೆ. ಇದು ನಮ್ಮ ವ್ಯಕ್ತಿತ್ವದ ಅಂತರಾಳಕ್ಕೆ ನಮ್ಮನ್ನು ಒಯ್ಯಬಲ್ಲುದು. ಹಾಗೆಂದೇ ಈ ಅಂಶವು 'ಜ್ಞಾನದ ಅತ್ಯಮೂಲ್ಯ ಅಂಗ' ವಾಗಿದೆ ಎಂದು ಡಬ್ಲ್ಯು. ಬಿ. ಹಾಕಿಂಗ್ ಹೇಳುತ್ತಾನೆ. ಆದರೆ ಈ ಬಗೆಯ ಜ್ಞಾನವು ಸುರಕ್ಷಿತವಾದುದು ಎಂದು ನಂಬಲು ಸಾಧ್ಯವಿಲ್ಲ. ಬಂಗ್ ಎಂಬ ಚಿಂತಕನು "ವೈಚಾರಿಕ ವಿಮರ್ಶೆಯಿಂದ ತಪ್ಪಿಸಿಕೊಳ್ಳುವ ಯಾವ ಬಗೆಯ ಅನುಭೂತಿ ಅಥವಾ ಅನುಭವವೂ ಸುರಕ್ಷಿತವಲ್ಲ" ಎಂದು ಅಭಿಪ್ರಾಯಪಡುತ್ತಾನೆ.

ಅನುಭೂತಿಯ ಸ್ಥಿತಿಯನ್ನು ಸಾಕ್ಷಾತ್ ಅನುಭವಿಸಿದವರೇ ಅನುಭಾವಿಗಳು (mystics). ಸತ್ಯತತ್ತ್ವದ ದರ್ಶನವನ್ನು ಅನುಭೂತಿಯು ಅವರಿಗೆ ಮಾಡಿಕೊಡುತ್ತದೆ. ಎಲ್ಲ ಪ್ರಮುಖ ಧರ್ಮಗಳ ಪ್ರವಾದಿಗಳು ಮತ್ತು ಸಂತರು ಇಂತಹ ದಾರ್ಶನಿಕರಾಗಿರುವುದನ್ನು ನಾವು ಗಮನಿಸಬಹುದು.

ಹೀಗೆ ಜ್ಞಾನದ ಹಲವು ಆಕರಗಳನ್ನು ನಾವು ಪರೀಕ್ಷಿಸಿದೆವು. ಇವುಗಳಲ್ಲಿ ಯಾವುದೇ ಒಂದು ಆಕರವೂ ಕೂಡ ಸ್ವತಂತ್ರವಾಗಿ ಸತ್ಯನಿಷ್ಠವಾದ ಜ್ಞಾನವನ್ನು ದೊರಕಿಸಿಕೊಡುತ್ತದೆ ಎನ್ನುವ ಹಾಗಿಲ್ಲ. ಮೇಲಿನ ಎಲ್ಲ ಆಕರಗಳಲ್ಲಿಯೂ ದೋಷವು ಕಂಡುಬರುವ ಸಾಧ್ಯತೆ ಇದ್ದೇ ಇದೆ. ಹೀಗಾಗಿ ಇವೆಲ್ಲದರ ಸಮನ್ವಯದಿಂದ ಸತ್ಯವನ್ನು ಅನ್ವೇಷಿಸಲು ಪ್ರಯತ್ನಿಸಬೇಕು ಎನ್ನುವುದೇ ವಿವೇಕಯುತವಾದ ಅಭಿಪ್ರಾಯ.

## ಜ್ಞಾನದ ಸ್ವರೂಪ

ಪರಿಕಲ್ಪನೆಗಳು ಬೇರೆ, ಅವುಗಳನ್ನು ವಿವರಿಸಲು ಬಳಸುವ ಭಾಷೆಯಲ್ಲಿ ಪ್ರಯೋಗಿಸುವ ಪದಗಳು ಬೇರೆ. ಪದಗಳನ್ನೇ ನಾವು ಜ್ಞಾನ ಎನ್ನಲಾಗದು. ಅವು ಪರಿಕಲ್ಪನೆಗಳನ್ನು ಸಂವಹನ ಮಾಡುವ ಮಾಧ್ಯಮಗಳಷ್ಟೆ. ಆದರೆ ಆ ಪದಗಳನ್ನು ನಾವು ಉಪಯೋಗಿಸುವ ವಿಧಾನಗಳು, ಅವುಗಳ ಜೊತೆಗೆ ಅವಿನಾಭಾವ ಸಂಬಂಧ ಹೊಂದಿರುವ ಪರಿಕಲ್ಪನೆಗಳ ಒಳನೋಟವನ್ನು ನಮಗೆ ನೀಡುತ್ತವೆ. 'ಜ್ಞಾನ' ಎಂಬ ಶಬ್ದವನ್ನು ದೈನಂದಿನ ಭಾಷೆಯಲ್ಲಿ ನಾವು

ಉಪಯೋಗಿಸುವ ಬಗೆಗಳನ್ನು ಅಧ್ಯಯನ ಮಾಡಿದಾಗ, ಜ್ಞಾನದ ಸ್ವರೂಪದ ಮಿಂಚುನೋಟ ನಮಗೆ ದೊರೆಯುತ್ತದೆ. 'ಅವನನ್ನು ತಿಳಿದುಕೋ', 'ಅದನ್ನು ತಿಳಿದುಕೋ', 'ಎಲ್ಲಿ ತಿಳಿದುಕೊಳ್ಳುವುದು?' 'ಏಕೆ ತಿಳಿದುಕೊಳ್ಳುವುದು?', 'ತಿಳಿದುಕೊಳ್ಳಬೇಕೆ?' – ಮುಂತಾದವು ಅಂತಹ ವಾಕ್ಯಪ್ರಯೋಗಗಳು. ಗಿಲ್ಬರ್ಟ್ ರೈಲ್ ಎನ್ನುವವನು 'ತಿಳಿದುಕೊಳ್ಳುವುದು ಏನನ್ನು?' ಮತ್ತು 'ತಿಳಿದುಕೊಳ್ಳುವುದು ಹೇಗೆ?' – ಇವುಗಳ ನಡುವಣ ವ್ಯತ್ಯಾಸವನ್ನು ಎತ್ತಿತೋರಿಸುತ್ತಾನೆ. 'ತಿಳಿದುಕೊಳ್ಳುವುದು ಹೇಗೆ?' ಎನ್ನುವುದು ಜ್ಞಾನವನ್ನು ಗಳಿಸಿಕೊಳ್ಳುವ ಸಾಮರ್ಥ್ಯ ಅಥವಾ ಕುಶಲತೆಯನ್ನು ಸೂಚಿಸುತ್ತದೆ. 'ತಿಳಿದುಕೊಳ್ಳುವುದು ಏನನ್ನು?' ಎನ್ನುವುದು ಅರಿತುಕೊಂಡ ಮಾಹಿತಿಯನ್ನು ಸೂಚಿಸುತ್ತದೆ. ಆದರೆ ಪ್ರಾಚೀನ ಕಾಲದಿಂದ ಹಿಡಿದು ಇಂದಿನ ಕಾಲದವರೆಗೂ ' ತಿಳಿದುಕೊಳ್ಳುವುದು ಏನನ್ನು?' ಎಂಬ ಪ್ರಶ್ನೆಯೇ ಮುಖ್ಯವಾಗಿ ಚಿಂತಕರ ಅಧ್ಯಯನದ ವಸ್ತುವಾಗಿತ್ತು. ಇದು ಅತ್ಯಂತ ವಿವಾದಾಸ್ಪದ ಸಂಗತಿ ಕೂಡ.

ಉದಾಹರಣೆಗೆ ನಾವು ಒಂದು ಪರ್ವತವನ್ನು ನೋಡಿದಾಗ, ಅದನ್ನು ಎರಡು ಸಂಗತಿಗಳಾಗಿ ವಿಭಜಿಸಬಹುದು: ೧. ಹೊರಗೆ ಇರುವ ಪರ್ವತ ೨. ಮನಸ್ಸಿನಲ್ಲಿ ಮೂಡಿರುವ ಅದರ ರೂಪ. ಮಾನಸಿಕ ಚಿತ್ರಣವು ನಮ್ಮದೇ, ಅಂದರೆ ವ್ಯಕ್ತಿನಿಷ್ಠ. ಬಾಹ್ಯ ಜಗತ್ತಿನಲ್ಲಿ ಕಾಣುವುದು ವಸ್ತುನಿಷ್ಠ. ಇವುಗಳಲ್ಲಿ ಯಾವುದು ನೈಜವಾದುದು? ನಮ್ಮ ಮನಸ್ಸಿನಲ್ಲಿ ಮೂಡುವ ಪರ್ವತದ ಚಿತ್ರಣವು ಹೊರಗಣ ಪರ್ವತವನ್ನು ಕರಾರುವಾಕ್ಕಾಗಿ ಪ್ರತಿನಿಧಿಸುವುದೇ? ಅವರೆಡರಲ್ಲಿ ಎಷ್ಟು ವ್ಯತ್ಯಾಸವಿದೆ? – ಈ ಪ್ರಶ್ನೆಗಳು ಎರಡು ಪ್ರಮುಖ ವಾದಗಳಿಗೆ ಎಡೆಮಾಡಿಕೊಡುತ್ತವೆ.

೧. **ವ್ಯಕ್ತಿನಿಷ್ಠ ವಾದ** (subjectivism): ಕೆಲವು ಚಿಂತಕರು ಜ್ಞಾನವೆಂದರೆ, ನಾವು ವಸ್ತುಗಳ ಅಸ್ತಿತ್ವದ ಪ್ರಜ್ಞೆಯನ್ನು ಪಡೆಯುವ ವಿಶೇಷ ರೀತಿಯ ಮಾನಸಿಕ ಸ್ಥಿತಿ ಎನ್ನುತ್ತಾರೆ. ಜ್ಞಾನದ ಗ್ರಹಿಕೆಯು ಹಲವು ಹಂತಗಳಲ್ಲಿರುವ ಮಾನಸಿಕ ಸ್ಥಿತಿಗಳಲ್ಲಿ ಕಾಣಸಿಗುತ್ತದೆ. ಅದರ ಅತ್ಯಂತ ಕೆಳಗಿನ ಹಂತವೆಂದರೆ, ಯಾವುದೇ ನಿಶ್ಚಿತತೆ ಇಲ್ಲದ ಕುರುಡು ನಂಬಿಕೆ. ನಾವು ಹಂತಗಳನ್ನು ಏರಿದಂತೆಲ್ಲ, ಹೆಚ್ಚು ಹೆಚ್ಚು ನಿಶ್ಚಯವಾಗಿ ಜ್ಞೇಯ ವಸ್ತುವು ಸ್ಫುಟವಾಗುತ್ತ ಹೋಗುತ್ತದೆ. ಆ ಹಂತಗಳಲ್ಲಿ ಚಿಂತನೆ, ತರ್ಕ, ಊಹೆ, ನಂಬಿಕೆ, ಭಾವನೆ – ಇವುಗಳೆಲ್ಲವೂ ಜ್ಞೇಯ ವಸ್ತುವಿನ ಪ್ರಜ್ಞೆಯನ್ನು ಹೆಚ್ಚು ಹೆಚ್ಚು ಗಾಢವನ್ನಾಗಿ ಮತ್ತು ನಿಶ್ಚಿತವನ್ನಾಗಿ ಮಾಡಲು ನಮಗೆ ಸಹಾಯ ಮಾಡುತ್ತದೆ. ಅತಿ ಉನ್ನತ ಹಂತದಲ್ಲಿ ಜ್ಞೇಯ ವಸ್ತುವು ಅತ್ಯಂತ ನಿರ್ದುಷ್ಟವಾಗಿಯೂ, ನಿಶ್ಚಯವಾಗಿಯೂ ಗೋಚರಿಸುತ್ತದೆ. ಇಲ್ಲಿ ಜ್ಞಾನವೆಂದರೆ ಚೈತನ್ಯ ಪ್ರಜ್ಞೆ. ಅರಿತುಕೊಳ್ಳುವುದೆಂದರೆ, ನಾವು ತಿಳಿಯಲಿಚ್ಛಿಸುವ ವಸ್ತುವನ್ನು ನಮ್ಮ ಚೈತನ್ಯಪ್ರಜ್ಞೆಯ ಪರಿಧಿಯ ಒಳಕ್ಕೆ ತರುವುದು. ಉದಾಹರಣೆಗೆ 'ಅ' ಎಂಬ ವ್ಯಕ್ತಿ 'ಬ' ಎಂಬ ವಸ್ತುವನ್ನು ಅರಿಯುತ್ತಾನೆ. ಈ ಸಂದರ್ಭದಲ್ಲಿ, ಆ ವ್ಯಕ್ತಿ 'ಬ' ಎಂಬ ವಸ್ತುವನ್ನು ತಿಳಿಯುವುದರ ಜೊತೆ ಜೊತೆಗೆ, ತಾನು 'ಬ' ಎಂಬ ವಸ್ತುವನ್ನು ಅರಿತಿದ್ದೇನೆ ಎಂಬ ಪ್ರಜ್ಞೆಯನ್ನೂ ಹೊಂದಿರುತ್ತಾನೆ. ಹೀಗೆ ಎಲ್ಲ ಜ್ಞಾನವೂ ವಸ್ತು ಜ್ಞಾನವನ್ನು ಸ್ವಪ್ರಜ್ಞೆಯೊಳಕ್ಕೆ ಅಂತರ್ಗತಮಾಡಿಕೊಳ್ಳುವ ಪ್ರಯತ್ನವಾಗಿದೆ ಎಂದು ಹೇಳಬಹುದು.

ಮುಂದಿನ ಪ್ರಶ್ನೆಯೆಂದರೆ, ವಸ್ತುವೊಂದರ ಗುಣಗಳನ್ನು ನಾವು ತಿಳಿಯುವುದು ಹೇಗೆ ಎಂಬುದು. ಜಾನ್ ಲಾಕ್ ಎಂಬ ಚಿಂತಕನು ಈ ಬಗೆಯ ಗುಣಗಳನ್ನು ಎರಡು ವರ್ಗಗಳಾಗಿ ವಿಂಗಡಿಸುತ್ತಾನೆ. **ಪ್ರಾಥಮಿಕ ಲಕ್ಷಣಗಳು** : ರೂಪ, ಗಾತ್ರ, ಸಂಖ್ಯೆ ಮುಂತಾದವು. **ಆನುಷಂಗಿಕ ಲಕ್ಷಣಗಳು** : ಬಣ್ಣ, ಶಬ್ದ, ರುಚಿ, ವಾಸನೆ ಮುಂತಾದವು. ವಸ್ತುವು ಪ್ರಾಥಮಿಕ ಗುಣಗಳಷ್ಟನ್ನೇ ಹೊಂದಿರುತ್ತದೆ, ಅದರ ಇತರ ಲಕ್ಷಣಗಳು ಮನಸ್ಸಿನಲ್ಲಿ ನಾವು ಮಾಡಿಕೊಳ್ಳುವ ಭಾವನೆಗಳು ಮಾತ್ರ ಎಂದು ಲಾಕ್ ಅಭಿಪ್ರಾಯ ಪಡುತ್ತಾನೆ. ಏಕೆಂದರೆ, ವಸ್ತುವೊಂದರ ಬಣ್ಣ, ರುಚಿ, ವಾಸನೆ ಮುಂತಾದವುಗಳ ಅನುಭವಗಳು ವ್ಯಕ್ತಿಯೊಬ್ಬನ ಇಂದ್ರಿಯಗಳನ್ನು, ಮನಸ್ಸನ್ನು ಆಧರಿಸಿದ್ದು, ಒಬ್ಬ ಮನುಷ್ಯನಿಂದ ಇನ್ನೊಬ್ಬ ಮನುಷ್ಯನಿಗೆ ಬದಲಾಗುತ್ತವೆ. ಹೀಗಾಗಿ ಅವು ವ್ಯಕ್ತಿನಿಷ್ಠವೇ ಹೊರತು, ವಸ್ತುನಿಷ್ಠವಲ್ಲ.

ಈ ವ್ಯಕ್ತಿನಿಷ್ಠ ವಾದವನ್ನು ತೀವ್ರರೂಪದಲ್ಲಿ ಜಾರ್ಜ್ ಬರ್ಕ್‌ಲಿ ಪ್ರತಿಪಾದಿಸುತ್ತಾನೆ. "ನಾವು ಏನನ್ನು ನೋಡುತ್ತೇವೆಯೋ, ಅದು ಮಾತ್ರ ಅಸ್ತಿತ್ವದಲ್ಲಿದೆ" ಎನ್ನುವುದು ಅವನ ಪ್ರಸಿದ್ಧವಾದ ಉಕ್ತಿ. ನಾವು ನೋಡುವ ವಸ್ತುವಿನ ಎಲ್ಲ ಗುಣಗಳೂ ಇರುವುದು ಮನಸ್ಸಿನಲ್ಲಿಯೇ; ಹೀಗಾಗಿ ಬಾಹ್ಯ ಜಗತ್ತೆಂಬುದು ಕೇವಲ ಮಾನಸಿಕ ಸೃಷ್ಟಿ ಎನ್ನುವುದು ಅವನ ಅಭಿಪ್ರಾಯ. ಅವನ ಪ್ರಕಾರ ಜಡ ಪದಾರ್ಥವೆಂಬುದೇ ಇಲ್ಲ. ಚೈತನ್ಯವೇ ಮನಸ್ಸಿನಲ್ಲಿ ಜಡರೂಪದಲ್ಲಿ ಕಾಣಿಸಿಕೊಳ್ಳುತ್ತದೆ, ಅಷ್ಟೇ. ಹಾಗೆಯೇ ನಮ್ಮ ಅನುಭವದ ಹೊರಗೆ ಯಾವುದೇ ಸತ್ಯತ್ವವಿಲ್ಲ. ಇರುವುದೊಂದೇ, ಅದೇ ನಮ್ಮ ಪ್ರಜ್ಞೆ ಅಥವಾ ಅನುಭವ; ಪ್ರಪಂಚವು ಸತ್ಯವೆಂಬಂತೆ ಕಾಣುವುದು ಅದು ನಮಗೆ ಅನುಭವಕ್ಕೆ ಬರುವುದರಿಂದ ಮಾತ್ರ. ಈ ಬಗೆಯ ಅದ್ವೈತಭಾವನೆಯೇ ಬರ್ಕ್‌ಲಿ ಮುಂದಿಡುವ ಸಿದ್ಧಾಂತ.

**೨. ವಸ್ತುನಿಷ್ಠ ವಾದ (objectivism):** ಮೇಲಿನ ವಾದಕ್ಕೆ ಪ್ರತಿಯಾಗಿ ಬಾಹ್ಯ ಜಗತ್ತಿನ ಅಸ್ತಿತ್ವವನ್ನು ವಸ್ತುನಿಷ್ಠ ವಾದವು ಎತ್ತಿಹಿಡಿಯುತ್ತದೆ. ವ್ಯಕ್ತಿನಿಷ್ಠ ವಾದವು ವಸ್ತುಗಳ ಜ್ಞಾನವೆಂಬುದು ಮನಸ್ಸಿನ ಭಾವನೆಗಳು ಮಾತ್ರವೇ ಆಗಿದ್ದು, ಅದಕ್ಕೆ ಬಾಹ್ಯ ಆಧಾರ ಇಲ್ಲವೆಂದು ಹೇಳುತ್ತದೆ. ಅಂದರೆ, ಒಂದು ವಸ್ತುವನ್ನು ನಾವು ತಿಳಿದುಕೊಳ್ಳುವ ತನಕ, ಅದು ನಮ್ಮ ಮನಸ್ಸಿನ ಹೊರಗಡೆ ಇರಲಿಲ್ಲವೆಂದೇ ಅರ್ಥ. ಹೀಗಾಗಿ ವಸ್ತುಗಳನ್ನು ತಿಳಿದುಕೊಂಡಾಗ ಮಾತ್ರ ಅವುಗಳಿಗೆ ಅಸ್ತಿತ್ವ ಬರುತ್ತದೆ ಎಂದಹಾಗಾಯಿತು. ಆದರೆ ಅರಿತುಕೊಳ್ಳುವುದು ಮಾತ್ರವೇ ಒಂದು ವಸ್ತುವಿಗೆ ಅಸ್ತಿತ್ವವನ್ನು ತಂದುಕೊಡುತ್ತದೆ ಎನ್ನುವುದನ್ನು ನಾವು ಯಾವ ರೀತಿಯಿಂದಲೂ ಸಾಧಿಸಲಾರೆವು. ಏಕೆಂದರೆ ಆಗ ನಾವು ಇನ್ನೂ ತಿಳಿದುಕೊಳ್ಳದ ಅಥವಾ ನಮ್ಮ ಅನುಭವಕ್ಕೆ ಇನ್ನೂ ಬರದ ವಸ್ತುಗಳು ಸರ್ವಥಾ ಇಲ್ಲವೆಂದಾಗುತ್ತದೆ. ಹೀಗೆ ವ್ಯಕ್ತಿನಿಷ್ಠ ವಾದವು ತಪ್ಪು ನಿಷ್ಕರ್ಷೆಗೆ ನಮ್ಮನ್ನು ಒಯ್ಯುತ್ತದೆ ಎನ್ನುವುದು ವಸ್ತುನಿಷ್ಠ ವಾದಿಗಳ ಅಭಿಪ್ರಾಯ.

ಅದಲ್ಲದೆ, ನಾವು ತಿಳಿದುಕೊಳ್ಳುವ ವಸ್ತುವೇ ನೇರವಾಗಿ

ನಮ್ಮ ಮನಸ್ಸಿನಲ್ಲಿ ಇರಲು ಸಾಧ್ಯವಿಲ್ಲ. ಅದರ ಬಗೆಗಿನ ವೃತ್ತಿ ಅಥವಾ ಸಂವೇದನೆ ಮಾತ್ರವೇ ನಮ್ಮ ಮನಸ್ಸಿನಲ್ಲಿ ಇರಲು ಸಾಧ್ಯ. ಮರವೊಂದರ ಜ್ಞಾನ ಕೇವಲ ಭಾವನೆ, ಅದಕ್ಕೆ ಬಾಹ್ಯದ ಯಾವ ಆಧಾರವೂ ಇಲ್ಲ ಎಂದಾದರೆ, ಮರವು ಕೇವಲ ಮನಸ್ಸಿನ ಭಾವನೆಯಾಗಷ್ಟೆ ಉಳಿಯುತ್ತದೆ. ಆದರೆ ನಿಜವಾಗಿ ಮನಸ್ಸಿನಲ್ಲಿ ಉಂಟಾಗುವುದು ಮರದ ಆಲೋಚನೆ ಮಾತ್ರ; ಮರವೇ ಮನಸ್ಸಿನಲ್ಲಿರುವುದಿಲ್ಲ.

ನಮ್ಮ ಅನುಭವದ ಪರಿಧಿಯ ಹೊರಗೆ ಒಂದು ಸ್ವತಂತ್ರವಾದ ಜಗತ್ತಿದೆ ಎಂಬ ಊಹೆಯನ್ನು ಸಿದ್ಧಮಾಡಿ ತೋರಿಸುವುದು ಸಾಧ್ಯವಿಲ್ಲವೇನೋ ಸರಿ. ಆದರೆ, ನಮ್ಮ ಪ್ರಜ್ಞೆಯು ತನ್ನೆಲ್ಲ ಅನುಭವಗಳಲ್ಲೂ ತನ್ನನ್ನು ಹೊರತುಪಡಿಸಿ, ಆಚೆಗೂ ಅಸ್ತಿತ್ವವಿದೆ ಎಂಬುದನ್ನು ಸದಾಕಾಲಕ್ಕೂ ಭಾವಿಸುತ್ತಿರುತ್ತದೆ. ನಮ್ಮ ಇಂದ್ರಿಯ ಅನುಭವವಾಗಲಿ, ಮನಸ್ಸಿನ ಆಂತರಂಗಿಕ ತನ್ಮಯತೆಯಾಗಲಿ, ನಮಗಿಂತ ಭಿನ್ನವಾಗಿ ಏನೋ ಇದೆ ಎಂಬ ಅನುಭವವನ್ನು ಎಲ್ಲಾಕಾಲಕ್ಕೂ ನಮಗೆ ನೀಡುತ್ತಲೇ ಇರುತ್ತದೆ. ಹೀಗಾಗಿ ಬಾಹ್ಯ ಪ್ರಪಂಚವಿಲ್ಲವೆನ್ನುವ ವಾದ ಸಾಧುವಾಗಿ ಕಾಣುವುದಿಲ್ಲ.

ಇನ್ನೊಂದು ಅಂಶವೆಂದರೆ, ನಾವು ಪಡೆದುಕೊಳ್ಳುವ ಎಲ್ಲ ಅನುಭವಗಳೂ ಬಾಹ್ಯ ಜಗತ್ತು ನಮ್ಮ ಮೇಲೆ ಹೇರಿರುವುದೇ ಆಗಿದೆ. ನಮ್ಮೆಲ್ಲ ಅನುಭವಗಳು ಬಹುತೇಕ ಬಾಹ್ಯಪ್ರಪಂಚದ ಸಂಬಂಧದ ಮೂಲಕವೇ ಉಂಟಾಗುತ್ತವೆ. ಬಾಹ್ಯ ಪ್ರಪಂಚವೇ ಇಲ್ಲವೆಂದು ವಾದಿಸಿದರೆ, ಆ ಅನುಭವಗಳನ್ನು ವಿವರಿಸಲಾಗುವುದೇ ಇಲ್ಲ.

ಕಡೆಯದಾಗಿ, ನಾವು ನಮ್ಮ ಮನಸ್ಸಿನ ಮೂಲಕ ಅನುಭವಿಸದೆಯೂ, ಹೊರಗಿನ ಕ್ರಿಯೆಗಳು ನಡೆಯುವುದನ್ನು ಊಹಿಸಿಕೊಳ್ಳಬಹುದು. ಬೆಂಕಿ ಉರಿಯುತ್ತಿರುತ್ತದೆ. ನಾವು ಸ್ವಲ್ಪ ಕಾಲ ಇನ್ನೆಲ್ಲೋ ಹೋಗಿ ಬಂದು ನೋಡಿದಾಗ, ಅದು ಸಣ್ಣದಾಗಿ ಉರಿಯುತ್ತಿರುತ್ತದೆ. ಅದರ ಪ್ರಖರತೆ ಕಡಮೆಯಾಗಿರುವ ಜ್ಞಾನ ಪಡೆಯಲು ನಾವು ಬೆಂಕಿಯನ್ನು ಯಾವಾಗಲೂ ಗಮನಿಸುತ್ತಿರುವ ಆವಶ್ಯಕತೆ ಇಲ್ಲ. ನಮ್ಮ ಮನಸ್ಸಿನ ಗ್ರಾಹ್ಯ ವಸ್ತುವಾಗದೆಯೂ, ಯಾವುದೋ ಒಂದು ಕ್ರಿಯೆ ಬಾಹ್ಯದಲ್ಲಿ ನಡೆಯುತ್ತಿರುತ್ತದೆ. ಅದಕ್ಕೆ ನಮ್ಮ ಮನಸ್ಸಿನ ಆವಶ್ಯಕತೆ ಇಲ್ಲ. ಹೀಗಾಗಿ ಮನಸ್ಸಿನ ಆಚೆ ಬಾಹ್ಯ ಪ್ರಪಂಚವಿದೆ ಎಂಬುದು ಸಾಬೀತಾಗುತ್ತದೆ.

ನಾವು ಎಷ್ಟೇ ಪ್ರಯತ್ನ ಮಾಡಿದರೂ ನಮ್ಮ ಮಾನಸಿಕ ಅನುಭವದ ಪರಿಧಿಗಿಂತ ಆಚೆ ಹೋಗಲಾರೆವು. ನಮ್ಮೆಲ್ಲ ಜ್ಞಾನವೂ ಇದರಿಂದಲೇ ಹೊರಹೊಮ್ಮಬೇಕು. ಇದರ ಹೊರಗೆ ಯಾವ ಜ್ಞಾನವೂ ಇಲ್ಲ. ಹೀಗಾಗಿ ವ್ಯಕ್ತಿನಿಷ್ಠ ವಾದವನ್ನು ಒಮ್ಮೆಲೇ ತಿರಸ್ಕರಿಸುವುದು ಸಾಧ್ಯವಾಗದು. ಹಾಗೆಂದು, ಮನಸ್ಸಿನ ಹೊರಗಡೆ, ವಸ್ತುಗಳು ಇಲ್ಲವೆಂದು ಹೇಳುವುದೂ ಕಷ್ಟಸಾಧ್ಯ. ಹೀಗೆ ಜ್ಞಾನವು ಮಾನಸಿಕ ಪ್ರಕ್ರಿಯೆಯಾಗಿದ್ದರೂ, ಬಾಹ್ಯ ಜಗತ್ತಿನ ಸಂಪರ್ಕ ಅವಶ್ಯಕ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಬರಿಯ ಮನಸ್ಸು ಮಾತ್ರವೇ ಜ್ಞಾನಕ್ಕೆ ಸಾಧನ ಎಂಬ ವಾದವಾಗಲಿ, ಕೇವಲ ಬಾಹ್ಯ ವಸ್ತುಗಳ ಅರಿವು ಮಾತ್ರ ಜ್ಞಾನ ಎಂಬ ವಾದವಾಗಲಿ, ವಾಸ್ತವಿಕತೆಯನ್ನು ಪ್ರತಿಬಿಂಬಿಸುವುದಿಲ್ಲ.

## ಜ್ಞಾನದ ಪ್ರಾಮಾಣ್ಯ

ಏಸುಕ್ರಿಸ್ತನನ್ನು ವಿಚಾರಣೆಗೆ ಒಳಪಡಿಸಿದ ರೋಮನ್ ಅಧಿಕಾರಿಯಾದ ಪಿಲಾತನು **'ಯಾವುದು ಸತ್ಯ?'** ಎಂದು ಕೇಳಿದ ಉಕ್ತಿ ಬಹಳ ಪ್ರಸಿದ್ಧವಾದುದು. ಇದು ಶತಮಾನಗಳಿಂದಲೂ ಚಿಂತಕರನ್ನು ಕಾಡುತ್ತಿರುವ ವಿಷಯ. ಆದರೆ, ಜಗತ್ತಿನಲ್ಲಿ ಯಾವುದನ್ನೂ 'ನಿರಪೇಕ್ಷ ಸತ್ಯ' ಎಂದು ನಿರ್ಧರಿಸಲಾಗದು. ಅದು ತತ್ತ್ವಶಾಸ್ತ್ರದ ಪರಿಧಿಗೆ ಮೀರಿದುದು. ಆದರೂ, ಸತ್ಯ ಎಂದು ಪರಿಗಣಿಸುವುದಕ್ಕೆ ಮೂರು ಬಗೆಯ ಪರೀಕ್ಷೆಗಳನ್ನು ಮಾಡಬಹುದು.

ಮೊದಲನೆಯದು, **ಹೋಲಿಸಿ ನೋಡುವುದು**. ಇದರ ಪ್ರಕಾರ ನಾವು ಪಡೆದುಕೊಂಡ ಜ್ಞಾನವನ್ನು, ವಾಸ್ತವಿಕ ಸಂಗತಿಗಳ ಜೊತೆಗೆ ಹೋಲಿಸಿ ನೋಡಬೇಕು. ಅದು ತಾಳೆಯಾದರೆ, ಅದನ್ನು ಸತ್ಯವೆಂದು ಪರಿಗಣಿಸಬೇಕು. ಉದಾಹರಣೆಗೆ ಹಿಮಾಲಯವು ಭಾರತದ ಉತ್ತರದಲ್ಲಿದೆ ಎನ್ನುವ ಹೇಳಿಕೆಯು ಸತ್ಯವಾದುದು. ಏಕೆಂದರೆ, ಅದು ಇನ್ನಿತರ ಭೌಗೋಳಿಕ ವಾಸ್ತವಾಂಶಗಳೊಡನೆ ತಾಳೆಯಾಗುತ್ತದೆ.

ಎರಡನೆಯದು, **ಸ್ಥಿರತೆಯ ಪರೀಕ್ಷೆ**. ನಾವು ಪಡೆದುಕೊಂಡ ಜ್ಞಾನವು ಈಗಾಗಲೇ ಸತ್ಯವೆಂದು ತಿಳಿಯಲಾಗಿರುವ ನಿಯಮಗಳಿಗೆ ಒಪ್ಪುತ್ತದೆಯೇ ಎಂದು ನಾವು ಪರೀಕ್ಷೆ ಮಾಡಿನೋಡಬೇಕು. ಆಗ, ಅದು ಸತ್ಯವೇ, ಇಲ್ಲವೇ ಎನ್ನುವುದು ತಿಳಿಯುತ್ತದೆ. ಉದಾಹರಣೆಗೆ ಗಣಿತಶಾಸ್ತ್ರದಲ್ಲಿ ಹಲವಾರು ಸಿದ್ಧಾಂತಗಳಿವೆ. ಯಾವುದೇ ನಿಯಮವು ಆ ಮೂಲಸಿದ್ಧಾಂತಗಳಿಗೆ ಅನುಗುಣವಾಗಿದ್ದಾಗ ಮಾತ್ರ ಅದನ್ನು ಸತ್ಯವೆಂದು ಪರಿಗಣಿಸಲಾಗುತ್ತದೆ.

ಮೂರನೆಯದು, **ನಾವು ಪಡೆದುಕೊಂಡ ಜ್ಞಾನದ ಪ್ರಯೋಜನ**. ಇದು ವಾಸ್ತವಿಕತಾ ವಾದಿಗಳು ಮುಂದಿಡುವ ವಾದ. ಯಾವುದೇ ಜ್ಞಾನವನ್ನು, ನಾವು ಅರಗಿಸಿಕೊಂಡು, ಪರೀಕ್ಷಿಸಿ, ಉಪಯೋಗಕ್ಕೆ ತಂದುಕೊಳ್ಳುವುದೇ ಅದರ ಸತ್ಯತ್ವಕ್ಕೆ ಪರೀಕ್ಷೆಯಾಗಿದೆ ಎನ್ನುವುದು ಅವರ ವಾದ. ಧರ್ಮ, ವಿಜ್ಞಾನ, ಆರ್ಥಿಕ ಕ್ಷೇತ್ರ – ಇವುಗಳಲ್ಲೆಲ್ಲ ಅನೇಕ ಸಿದ್ಧಾಂತಗಳು ಅನುಷ್ಠಾನಪ್ರದವಾಗಿದ್ದು, ಪ್ರಯೋಜನಕ್ಕೆ ಬರುವಂತಹವುಗಳಾಗಿವೆ. ಇವುಗಳನ್ನು ಸತ್ಯವೆಂದು ಪರಿಗಣಿಸಬೇಕೇ ಹೊರತು, ಕೇವಲ ಬೌದ್ಧಿಕ ಕಸರತ್ತುಗಳಾಗಿ ಮಾತ್ರ ಉಳಿಯುವ ತತ್ತ್ವಗಳನ್ನಲ್ಲ ಎನ್ನುವುದು ವಾಸ್ತವಿಕತಾ ವಾದಿಗಳ ಅಭಿಪ್ರಾಯ.

## ಉಪಸಂಹಾರ

ಜ್ಞಾನದ ಬಗೆಗಿನ ಪಾಶ್ಚಾತ್ಯ ತತ್ತ್ವಶಾಸ್ತ್ರದ ಚಿಂತನೆಗಳು, ಜ್ಞಾನದ ಗಳಿಕೆಯಲ್ಲಿ ಮಾನವನ ಮನಸ್ಸು, ಬಾಹ್ಯಜಗತ್ತು ಮತ್ತು ಇವೆರಡರ ನಡುವಣ ಸಂಬಂಧವು ವಹಿಸುವ ಪಾತ್ರದ ಮೇಲೆ ಬೆಳಕು ಚೆಲ್ಲುತ್ತವೆ. ಆ ಮೂಲಕ ಜ್ಞಾನ ಮತ್ತು ಚೈತನ್ಯವು ಅಭೇದ ಎಂದು ಪರಿಗಣಿಸುವ ಭಾರತೀಯ ಜ್ಞಾನಶಾಸ್ತ್ರವನ್ನು ವಿಮರ್ಶಾತ್ಮಕವಾಗಿ ವಿಚಾರ ಮಾಡಲು ಮನೋಭೂಮಿಕೆಯನ್ನು ಸಿದ್ಧಪಡಿಸುತ್ತವೆ. ಚೈತನ್ಯದ **'ಚಿತ್'** ಅಂಶವೇ ಜ್ಞಾನವೆಂದು ವೇದಾಂತ ಪರಿಗಣಿಸುತ್ತದೆ. ಅದು ಅನುಭೂತಿಯ ಸ್ಥಿತಿಯಲ್ಲಿ ಮಾತ್ರವಲ್ಲದೆ, ನಿತ್ಯ ಜೀವನದ ಅನುಭವದಲ್ಲಿಯೂ ಹಾಸು ಹೊಕ್ಕಾಗಿದೆ. ಅತ್ಯಂತ ಸ್ವಾರಸ್ಯಕರವಾದ ಇದರ ವಿಚಾರವನ್ನೇ ನಾವು ಮುಂದಿನ ತಿಂಗಳ ಸಂಚಿಕೆಯಲ್ಲಿ ಮಾಡುವುದು.